# ರೋಚಕ ಬಿಲ್ವಿದ್ಯೆ!



64 ವಿದ್ಯೆಗಳಲ್ಲಿ ಬಿಲ್ವಿದ್ಯೆಯೂ ಒಂದು ಎನ್ನುತ್ತಾರೆ. ಈ ಬಿಲ್ವಿದ್ಯೆ ಅಥವಾ ಧನುರ್ವಿದ್ಯೆಯ ಕುರಿತು ರಾಮಾಯಣ, ಮಹಾಭಾರತದಲ್ಲಿ ಕೇಳಿದ್ದೇವೆ. ಇದರ ಆಯಾಮಗಳು ಭಿನ್ನ ಭಿನ್ನವಾಗಿವೆ. ಬಿಲ್ಲನ್ನು ಕೈಯಿಂದ ನೇರವಾಗಿ ಬಿಡುವುದು, ಕಾಲಿನ ಒಂದು ಬೆರಳಿನಿಂದ ಬಾಣ ಹಾಗೂ ಇನ್ನೊಂದು ಬೆರಳಿನಿಂದ ಬಿಲ್ಲನ್ನು ಹಿಡಿದು ಬಾಣ ಪ್ರಯೋಗಿಸುವುದು. ಕನ್ನಡಿಯಲ್ಲಿ ನೆರಳು ನೋಡಿ ಬಾಣದಿಂದ ದೂರದಲ್ಲಿರುವ ಮತ್ಸ್ಯವನ್ನು ಭೇದಿಸುವುದು ಅತ್ಯಂತ ರೋಚಕ ಬಿಲ್ಲು ವಿದ್ಯೆ.

ಆದರೆ ಈ ವಿದ್ಯೆಯನ್ನು ಈ ಕಲಿಯುಗದಲ್ಲಿ ಕಲಿತವರು ಬಹಳ ವಿರಳ. ಆಂಧ್ರಪ್ರದೇಶದ ದೇವಸ್ಥಾನವೊಂದರಲ್ಲಿ ಅರ್ಚಕರಾಗಿರುವ ಧನುರ್ವಿದ್ಯಾ ಪ್ರವೀಣ ಲಿಂಗಂಗುಂಟ್ಲು ಸುಬ್ರಾವ್ ಹಾಗೂ ಅವರ ಪುತ್ರಿ ರಮ್ಯಾ ಈ ಬಿಲ್ವಿದ್ಯೆಯಲ್ಲಿ ಸೈ ಎನಿಸಿಕೊಂಡಿದ್ದಾರೆ.

ಇವರು ಈ ಬಿಲ್ವಿದ್ಯೆ ಪ್ರದರ್ಶನವನ್ನು ಇತ್ತೀಚೆಗೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ನೀಡಿ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು.

ಚಿತ್ರ- ಬರಹ: **ಗಣಪತಿ ಶಿರಳಗಿ, ಸಾಗರ**



# ಅಟ್ಟಣಿಗೆ

ಮಲೆನಾಡಿನ ರೈತ ತಾನು ಬೆಳೆದ ಬೆಳೆಗಳನ್ನು ಸಾಕುಪ್ರಾಣಿ ಹಾಗೂ ಕಾಡುಪ್ರಾಣಿಗಳಿಂದ ರಕ್ಷಣೆ ಮಾಡಿಕೊಳ್ಳುವುದು ಸುಲಭದ ಮಾತಲ್ಲ. ರೈತ ಎಷ್ಟೇ ಅಚ್ಚುಕಟ್ಟಾಗಿ ಬೇಲಿ ಹಾಕಿದರೂ ಈ ಪ್ರಾಣಿಗಳು ನುಸುಳುವ ಪ್ರಯತ್ನ ಮಾಡೇ ಮಾಡುತ್ತವೆ. ರೈತ ತಾನು ಹೊಲಕ್ಕೆ ಹೋಗಲು ಮಾಡಿಕೊಂಡ ದಣಪೆಯೇ ಕೆಲವೊಮ್ಮೆ ಇವಕ್ಕೆ ರಾಜಮಾರ್ಗವಾಗುತ್ತದೆ. ಇದಕ್ಕೆ ರೈತ ಕಂಡುಕೊಂಡ ಹೊಸ ಉಪಾಯ 'ಅಟ್ಟಣಿಗೆ'.

ಪ್ರಾದೇಶಿಕವಾಗಿ ಬೇರೆಬೇರೆ ಹೆಸರಿನಿಂದ ಕರೆಯಲ್ಪಡುವ ಅಟ್ಟಣಿಗೆಯನ್ನು ಬೇಲಿಯ ಎರಡೂ ಕಡೆ ಮಾಡಲಾಗುತ್ತದೆ. ಬೇಲಿಯ ತುದಿಯಿಂದ ಇಳಿಜಾರಿನಲ್ಲಿ ಐದಾರು ಗೂಟಗಳನ್ನು ಭೂಮಿಯವರೆಗೆ ಗಟ್ಟಿಯಾಗಿ ಪೋಣಿಸುತ್ತಾರೆ. ಆಗ ರೈತ ಒಂದು ಕಡೆಯಿಂದ ಹತ್ತಿ ಇನ್ನೊಂದು ಕಡೆಯಿಂದ ಸುಲಭವಾಗಿ ಇಳಿಯುತ್ತಾನೆ. ಈ ರೀತಿ ಹತ್ತುವುದು ಪ್ರಾಣಿಗಳಿಗೆ ಅಸಾಧ್ಯ.

**-ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**

# ಕೇಳ್ರಪ್ಪೋ ಕೇಳಿ..



ಹಿಂದೆ ರಾಜರ ಕಾಲದಲ್ಲಿ ಏನಾದರೂ ವಿಷಯವನ್ನು ಸಾರ್ವಜನಿಕರಿಗೆ ತಿಳಿಸಬೇಕಾದರೆ ಡಂಗೂರ ಸಾರುವ ಪದ್ಧತಿ ಜಾರಿಯಲ್ಲಿ ಇತ್ತು. ಚಿಕ್ಕಮಗಳೂರು ಸಮೀಪದ ಸಖರಾಯಪಟ್ಟಣ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈಗಲೂ ಇದು ಜಾರಿಯಲ್ಲಿದೆ. ಈ ಚಿತ್ರದಲ್ಲಿರುವವರು ಹನುಮಂತಪ್ಪ, ತಮ್ಮ ಹನ್ನೆರಡನೇ ವಯಸ್ಸಿನಿಂದ ಅಂದರೆ ಕಳೆದ 40 ವರ್ಷಗಳಿಂದ ಸಾರುವ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಗ್ರಾಮದೇವತೆ ರಥೋತ್ಸವ–ಜಾತ್ರೆಯಾಗಲಿ, ಹರಾಜಾಗಲಿ, ಗ್ರಾಮ ಪಂಚಾಯತಿಯ ಯಾವುದೇ ಠರಾವು ಅಥವಾ ಪ್ರಕಟಣೆಗಳಿರಲಿ ಗ್ರಾಮದ ಬೀದಿಬೀದಿಗಳಲ್ಲಿ ತಮಟೆ ಬಾರಿಸುತ್ತಾ ಡಂಗೂರ ಸಾರುತ್ತಾ ಊರಿನ ಜನರಿಗೆ ಸುದ್ದಿಯನ್ನು ಮುಟ್ಟಿಸುತ್ತಾರೆ. ತಲೆ ತಲಾಂತರದಿಂದ ನಡೆಯುತ್ತಿರುವ ಈತನ ಕುಟುಂಬದವರ ಸೇವೆ ಅವಿಸ್ಮರಣೀಯ.

**–ಸವಿತಾ ಸಚ್ಚಿದಾನಂದ, ಸಖರಾಯಪಟ್ಟಣ**